A.—**Sri T. SUBRAMANYA** (Minister for Law, Labour and Local Self-Government).—

(*a*) No.

(*b*) Does not arise.

ಶ್ರೀ ಕುಂದೂರು ರುದ್ರಪ್ಪ.—ಈ ರಸ್ತೆಯ ಅಂದಾಜುಗಳು ತಯಾರಾಗಿ ಶಿಫಾರ್ಸು ಬಂದಿದೆ. ಆದರೂ ಸಹ (a) ಭಾಗಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಇದಕ್ಕೆ ಕಾರಣವೇನು ?

†ಶ್ರೀ ಟಿ. ಸುಬ್ರಹ್ಮಣ್ಯ.—ಮಾನ್ಯ ಸದಸ್ಯರು ಕೇಳಿರುವುದು " whether they have received any representation to treat the road between Nyamathi and Govinakovi" ಎಂದು. ನಮಗೆ ಮನವಿಗಳೇನೂ ಇದುವರೆಗೂ ಬಂದಿಲ್ಲ. ಆದರೆ ವರ್ತಮಾನ ತಿಳಿದಿದ್ದರಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರು ಇದರ ಅವಶ್ಯಕತೆ ಇದೆ ಎಂದು ಶಿಫಾರ್ಸು ಮಾಡಿದ್ದಾರೆ. It must have been held up. ಸೂಪರಿಟೆಂಡಿಗ್ ಇಂಜಿನಿಯರ್ ಅಥವಾ ಇನ್ನು ಯಾರ ಹತ್ತಿರ ನಿಂತಿದೆಯೋ ಗೊತ್ತಿಲ್ಲ. ಇನ್ನೂ ಸರ್ಕಾರಕ್ಕೆ ಬಂದಿಲ್ಲ.

ಶ್ರೀ ಡಿ. ಟಿ. ನೀತಾರಾಮರಾವ್.—ಇದು ಹೊನ್ನಾಳಿ ತಾಲ್ಲೂಕನಲ್ಲಿರುವ ರಸ್ತೆ ಎಂದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಟಿ. ಸುಬ್ರಹ್ಮಣ್ಯ.—ಹೊನ್ನಾಳಿ ತಾಲ್ಲೂಕಿನಲ್ಲಿದೆ ಎಂದು ತಿಳಿದುಕೊಂಡಿದ್ದೇನೆ.

Sri A. R. BADRI NARAYAN.—I put it that this is a very important road; will the Government consider taking it up as a State Fund road ?

Sri T. SUBRAMANYA.—It is reported that it is a very important road connecting two State Fund roads. There is some black cotton soil in between these two places. Difficulty is felt by the villagers because they themselves cannot form the road. The PWD will consider taking over this road at the time when they take over some more District Board roads to their control.

ಶ್ರೀ ಕುಂದೂರು ರುದ್ರಪ್ಪ.—ನಾನು ಉಪ ಪ್ರಶ್ನೆಗಳನ್ನು ಕೇಳಲು ಮಾನ್ಯ ಮಂತ್ರಿಗಳು ಏನು ಹೇಳಿದರೆಂಬುದೇ ತಿಳಿಯಲಿಲ್ಲ.

ಶ್ರೀ ಟಿ. ಸುಬ್ರಹ್ಮಣ್ಯ.—ನಾನು ಇಂಗ್ಲೀಷಿನಲ್ಲಿ ಹೇಳಿದ್ದು ಅವರಿಗೆ ಗೊತ್ತಾಗಲಿಲ್ಲವೆಂದು ಕಾಣುತ್ತದೆ. ಆದ್ದರಿಂದ ಕನ್ನಡದಲ್ಲಿ ಹೇಳುತ್ತೇನೆ. ಇದು ಪ್ರಾಮುಖ್ಯವಾದ ರಸ್ತೆಯಾದುದರಿಂದ ತೆಗೆದುಕೊಳ್ಳಬೇಕೆಂದು ಎಕ್ಸಿಕ್ಯೂಟಿವ್ ಇಂಜಿನಿಯರು ಶಿಫಾರಸು ಮಾಡಿರುವ ಹಾಗೆ ಈಚೆಗೆ ಗೊತ್ತಾಗಿದೆ. ಅಲ್ಲಿ ಸ್ವಲ್ಪ black cotton soil ಇರುವುದರಿಂದ ರಸ್ತೆಯನ್ನು ಮಾಡುವುದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿಗೆ ಕಷ್ಟ, ಪಬ್ಲಿಕ್‌ವರ್ಕ್ಸ್ ಇಲಾಖೆಗೆ ತೆಗೆದುಕೊಳ್ಳಬೇಕೆಂದು ಬರೆದಿರುವುದಾಗಿ ವರ್ತಮಾನ ಬಂದಿದೆ. ರಿಕಾರ್ಡ್ ನಮ್ಮ ಹತ್ತಿರ ಬಂದಿಲ್ಲ. ಮುಂದಿನ ವರ್ಷ ಬೇರೆ ರಸ್ತೆಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನಿಂದ ತೆಗೆದುಕೊಂಡು ಪಬ್ಲಿಕ್‌ವರ್ಕ್ಸ್ ಇಲಾಖೆಗೆ ತೆಗೆದುಕೊಳ್ಳುವ ಬಗ್ಗೆ ಪ್ರಾಮುಖ್ಯತೆಯನ್ನು ಕೊಡಬಹುದೆಂದು ಯೋಚನೆ ಮಾಡುವುದರಲ್ಲಿ ಕಾಣುತ್ತದೆ.

Collection of Mirase by Thotis and Talaris.

Q.*—201. **Sri J. NARAYANAPPA (Mulbagal).—

Will the Government be pleased to state :—

whether the thotis and talaris of the Government collect the mirase due to them from the ryots or the Government collects the same for those people?

A.—**Sri Kadidal MANJAPPA** (Minister for Revenue).—

The thotis and talaris themselves collect the miras due to them from the ryots.

ಶ್ರೀ ಜೆ. ನಾರಾಯಣಪ್ಪ.—ತೋಟಿ ತಳಾರಿಗಳು ತಾವೇ ಮಿರಾಸೆಯನ್ನು ವಸೂಲ್ಮಾಡುತ್ತಾರೆಂದು ಹೇಳಿದ್ದಾರೆ. ಅವರು ಸರ್ಕಾರಕ್ಕೆ ಸೇರಿದವರೇ ಅಥವಾ ಗ್ರಾಮದ ರೈತರಿಗೆ ಸೇರಿದವರೇ?

†ಶ್ರೀ ಕಡಿದಾಳ್ ಮಂಜಪ್ಪ.–ದೇಶಕ್ಕೆ ಸೇರಿದವರು.

ಶ್ರೀ ಟಿ. ಹನುಮಯ್ಯ.—ಪಾಯಿಂಟ್ ಆಫ್ ಆರ್ಡರ್ ಸ್ವಾಮಿ. ಮಾನ್ಯ ಸದಸ್ಯರು ತೋಟಿ ತಳಾರಿಗಳು ಸರ್ಕಾರಕ್ಕೆ ಸೇರಿದವರೇ ಅಥವಾ ರೈತರಿಗೆ ಸೇರಿದವರೇ ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ದೇಶಕ್ಕೆ ಸೇರಿದವರು ಎಂದರೆ ಏನು ಅರ್ಥ ಸ್ವಾಮಿ? ಎರಡಕ್ಕೂ ತಪ್ಪಿದವರು ಎಂದೋ? ಇದನ್ನು ಮಾನ್ಯ ಮಂತ್ರಿಗಳು ವಿಶದಪಡಿಸಬೇಕು.

ಅಧ್ಯಕ್ಷರು.—ಅದು ಪಾಯಿಂಟ್ ಆಫ್ ಆರ್ಡರ್ ಅಲ್ಲ. ಪ್ರಶ್ನೆ ಇದೆ.

ಶ್ರೀ ಕಡಿದಾಳ್ ಮಂಜಪ್ಪ.—ದೇಶಕ್ಕೆ ಸೇರಿದವರು ಎಂದರೆ ಸರ್ಕಾರಕ್ಕೆ ಸೇರುತ್ತಾರೆ. ಇವರು ಸರ್ಕಾರಿ ನೌಕರರು.

Sri G. DUGGAPPA.—In view of the present system of collecting mirase by Thotis and Talaris themselves, are the Government aware that they are not in a position to realise mirase in toto and therefore will the Government take immediate steps to see that mirase is collected by the revenue officials instead of by Thotis and Thalaris?

Sri Kadidal MANJAPPA.—Wherever there are complaints that mirase has not been paid the Tahsildar will collect. No doubt I agree with the Hon'ble Member that in many cases it has not been possible for Thoties and Talaris to collect mirase directly from the raiyats. Therefore we have thought of

doing away with the whole system of Thotis and Talaris and appointing paid servants in their place.

ಶ್ರೀ ಜೆ. ನಾರಾಯಣಪ್ಪ.—ಮಿರಾಸೆ ವಸೂಲಾಗ ದಿದ್ದರೆ ಅದನ್ನು ಯಾರು ವಸೂಲ್ಮಾಡಿ ಕೊಡುತ್ತಾರೆ? ಅವರೇ ಜಗಳವಾಡಿ ತೆಗೆದುಕೊಳ್ಳ ಬೇಕೇ?

ಶ್ರೀ ಕಡಿದಾಳ್ ಮಂಜಪ್ಪ.—ಮಿರಾಸೆ ವಸೂಲಾಗ ಲಿಲ್ಲ. ಕೊಡಲಿಲ್ಲವೆಂದು ತಹಸೀಲ್ದಾರರಿಗೆ ಗ್ರಾಮ ನೌಕರರು ಅರ್ಜಿ ಕೊಟ್ಟರೆ ತಹಸೀಲ್ದಾರರು ವಸೂ ಲ್ಮಾಡಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎ. ಮುನಿಯಪ್ಪ.—ಯಾವಾಗ ರೈತರು ಮಿರಾಸೆಯನ್ನು ಕೊಡಲಿಲ್ಲವೆಂದು ಅರ್ಜಿಕೊಡುತ್ತಾ ರೆಯೋ ಆ ಮಾರನೆಯ ದಿವಸವೇ ಊರಿನಲ್ಲಿ ಹರಿಜನ ರಿಗೂ ಮತ್ತು ರೈತರಿಗೂ ಜಗಳವಾಗಿ ಎಷ್ಟೋ ಕೇಸುಗಳು ಕೋರ್ಟುಗಳಲ್ಲಿ ಇವೊತ್ತಿಗೂ ನಡೆಯುತ್ತಿ ರುವುದು ತಮಗೆ ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲೋ ಒಂದೆರಡ ಕಡೆಗಳಲ್ಲಿ ಆರೀತಿ ಆಗಿರಬಹುದು. ಎಲ್ಲ ಕಡೆಗಳ ಲ್ಲಿಯೂ ಆಗಿಲ್ಲ. ಸೌಹಾರ್ದದಿಂದ ಇದ್ದಾರೆ.

ಶ್ರೀ ಟಿ. ಹನುಮಯ್ಯ.—ಮಿರಾಸೆಯ ಬಗ್ಗೆ ಡಿ.ಸಿ.ಬಿ. ತಯಾರಾಗಿದೆಯೇ? ಮತ್ತು ಯಾವ ತಾಲ್ಲೂಕು ಕಚೇರಿಯಿಂದಲಾದರೂ ರಿಪೋರ್ಟ್ ಬಂದಿ ದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ರೆವೆನ್ಯೂ ಡಿವ್ಯಾಂಡಿನ ಹಾಗೆ ಮಿರಾಸೆಯ ಬಗ್ಗೆ ಡಿ.ಸಿ.ಬಿ. ತಯಾರು ಮಾಡುವು ದಿಲ್ಲ.

ಶ್ರೀ ಟಿ. ಹನುಮಯ್ಯ.—ಡಿಸ್ಟ್ರಿಕ್ಟ್ ಕಚೇರಿಯಲ್ಲಿ, ತಾಲ್ಲೂಕು ಕಚೇರಿಯಲ್ಲಿ, ಎಲ್ಲಿಯಾದರೂ ತಯಾರಾಗಿ ರುವ ಡಿ.ಸಿ.ಬಿ.ಯನ್ನು ಮುಂದಿನ ಅಧಿವೇಶನದಲ್ಲಾ ದರೂ ಮಾನ್ಯ ಸದಸ್ಯರ ಗಮನಕ್ಕೆ ತರಲು ಇಷ್ಟಪಡು ತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಮಾಡುವುದಕ್ಕೆ ಕಷ್ಟ. ಯಾವಕಡೆ ಕೊಟ್ಟಿದ್ದಾರೆ, ಯಾವಕಡೆ ಕೊಟ್ಟಿಲ್ಲ ವೆಂದು ದೂರುಗಳು ಬಂದ ಹೊರತು ತಿಳಿದುಕೊಳ್ಳು ವುದಕ್ಕೆ ಸಾಧ್ಯವಿಲ್ಲ. ಅದುದರಿಂದಲೇ ಈ ಪದ್ಧತಿ ಹೋಗಬೇಕೆಂದು ತರ್ಮಾನ ಮಾಡಿದ್ದೇವೆ. ಒಂದು ವಿಷಯದಲ್ಲಿ ಮಾತ್ರ ಭರವಸೆಯನ್ನು ಕೊಡಬಹುದು. ಯಾವುದಾದರೂ ಸ್ಥಳದಲ್ಲಿ ತೋಟಿ ತಳಾರಿಗಳಿಗೆ ಮಿರಾಸೆ ಬಂದಿಲ್ಲವೆಂದು ತಹಸೀಲ್ದಾರರಿಗೆ ಅರ್ಜಿಹಾಕಿ ದರೆ ಆ ಅರ್ಜಿಯ ಮೇಲೆ ಕ್ರಮ ತೆಗೆದುಕೊಳ್ಳ ಬೇಕೆಂದು ಸರ್ಕಾರ ಸೂಚನೆಯನ್ನು ಕೊಡುತ್ತದೆ.

ಶ್ರೀ ಎ. ಮುನಿಯಪ್ಪ.—ಮಂತ್ರಿ ಮಂಡಲದವರು ಗ್ರಾಮ ನೌಕರರನ್ನು ರದ್ದು ಮಾಡಬೇಕೆಂದು ಆಜ್ಞೆ ಮಾಡಿದಮೇಲೆ ಗ್ರಾಮಗಳಲ್ಲಿರುವ ರೈತರು ಇವರು ಹೇಗಿದ್ದರೂ ಹೋಗುತ್ತಾರೆಂದು ಈಗಿನಿಂದಲೇ ಮಿರಾ ಸೆಯನ್ನು ಕೊಡಪೆ ತೂಂದರೆ ಕೊಡುತ್ತಿರುವುದರಿಂದ ಅವರಿಗೆ ಮಿರಾಸೆ ಸರಿಯಾಗಿ ದೊರೆಯುವಂತೆ ಮಾಡಲು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಈಗ ತಾನೇ ಹೇಳಿದ್ದೇನೆ. ಎಲ್ಲಿ ಮಿರಾಸೆಯನ್ನು ಕೊಡಲಿಲ್ಲವೆಂದು ದೂರು ಬರುತ್ತದೆಯೋ ಅಲ್ಲಿ ತಹಸೀಲ್ದಾರರ ನೂಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆಯನ್ನು ಕೊಡುತ್ತೇವೆ.

Uniform Legislation for the State.

*Q.—213. Sri M. M. PATIL (Hadagalli).—

Will the Government be pleased to state :—

(*a*) the reasons for the delay in bringing a unifrom legislation for the entire State ;

(*b*) whether they are aware that the people of the respective areas are put to considerable trouble on account of this delay ?

A.—Sri T. SUBRAMANYA (Minister for Law, Labour and Local Self-Government).—

(*a*) There has been no delay. Forty-four Bills in this behalf have been placed before the Legislature. Sixteen have been passed into law including eight taxation laws. Some more Bills will be introduced in the Legislature during the year.

(*b*) The enactment of the various uniform laws has considerably reduced the inconvenience to the commercial and agricultural classes and the passing of the other Bills will further reduce the inconvenience to the majority of the public.

ಶ್ರೀ ಎಂ. ಎಂ. ಪಾಟೀಲ್.—ಬಳ್ಳಾರಿ ಜಿಲ್ಲೆ ಮೈಸೂರು ರಾಜ್ಯಕ್ಕೆ ಬಂದು ನುಪಾರು ಆರು ವರ್ಷ ಗಳಾದುವು. ಆದರೂ ಬಳ್ಳಾರಿಯಲ್ಲಿ ಇನ್ನೂ ಅನೇಕ ಮದ್ರಾಸಿನ ಕಾನೂನುಗಳೇ ಜಾರಿಯಲ್ಲಿರುತ್ತವೆ. ಯೂನಿಫಾರಂ ಮಾಡುವ ಕಾನೂನುಗಳು ಇನ್ನೆಷ್ಟು ಉಳಿದಿವೆ ಎಂದು ತಿಳಿಸುವುದಕ್ಕೆ ಸಾಧ್ಯವೇ?

†ಶ್ರೀ ಟಿ. ಸುಬ್ರಹ್ಮಣ್ಯ.—ಇಷ್ಟೇ ಉಳಿದಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ.

Sri G. B. SHANKAR RAO.—Do Government think that a period of 3 years after integration is not enough to consider it as delay ?

Sri T. SUBRAMANYA.—Sir, it is a matter of opinion. I find that we cannot pass uniform law in a short space of three years. There are several laws which are to be made uniform and it will take time.

ಶ್ರೀ ಎಂ. ಎಂ. ಪಾಟೀಲ್.—1ನೆಯ ನವಂಬರ್ 1956ರಲ್ಲಿ ಕನ್ನಡ ಪ್ರದೇಶಗಳನ್ನು ಒಟ್ಟುಗೂಡಿಸಿದ್ದು ಯೂನಿಫಾರಂ ಲೇಜಿಸ್ಲೇಷ್ಷ ತರುವುದಕ್ಕೆ ಇನ್ನೆಷ್ಟು ಕಾಲವಿಳಂಬವಾಗ ಬಹುದು ?

ಶ್ರೀ ಟಿ. ಸುಬ್ರಹ್ಮಣ್ಯ.—ಬಹುಶಃ ಇನ್ನು ಒಂದೆ ರಡು ವರ್ಷಗಳಾಗಬಹುದು.

Sri C. K. RAJAIAH SETTY.—According to the Minister, there has been no